# ಯಾದವಾರ್ಯರು
# ಆರಾಧನ – ಭಾದ್ರಪದ ಶುದ್ದ ಪೌರ್ಣಮಿ

- ಕಾಲ – **1580 – 1630**
- ಜನ್ಮಸ್ಥಳ – ಯಕ್ಕುಂದಿ, ಸವದತ್ತಿ ತಾಲ್ಲೂಕು, ಬೆಳಗಾಂ ಜಿಲ್ಲೆ
- ವೃಂದಾವನ – ಮುನ್ನೋಳಿ
- ಇವರಿಗಿದ್ದ ಬಿರುದು – "ಯಾದುಪತ್ಯ" – ಇವರ ಗ್ರಂಥಗಳ ವ್ಯಾಖ್ಯಾನವನ್ನು ಯಾದುಪತ್ಯ ವ್ಯಾಖ್ಯಾನವೆಂದು ಕರೆಯುತ್ತಾರೆ
- ವಿದ್ಯಾಗುರುಗಳು – ಶ್ರೀ ವೇದೇಶ ತೀರ್ಥರು
- (ಇವರ ಪೂರ್ವಾಶ್ರಮ ಸಹೋದರರು
-

<u>ವ್ಯಾಖ್ಯಾನಗಳು, ಕೃತಿಗಳು</u> –

ಶ್ರೀಮನ್ನ್ಯಾಯಸುಧಾ ವ್ಯಾಖ್ಯಾನ

ಶ್ರೀಮಧ್ಭಾಗವತ ವ್ಯಾಖ್ಯಾನ

ಯಮಕಭಾರತ ವ್ಯಾಖ್ಯಾನ

ತತ್ತ್ವಸಂಖ್ಯಾನ ವ್ಯಾಖ್ಯಾನ

ಸದಾಚಾರಸ್ಮೃತಿ ವ್ಯಾಖ್ಯಾನ

ವಿಷ್ಣುಸ್ತೋತ್ರ

ವೇದವ್ಯಾಸ ಗದ್ಯ

ಪ್ರಾರ್ಥನಾ ಪಂಚಕ ಸ್ತೋತ್ರ

**ಅಗ್ರತೋ ನಾರಸಿಂಹಶ್ಚ ಪೃಷ್ಠತೋ ಗೋಪರೂಪಿಣಂ ।**
**ಉಭಯೋಃ ಪಾರ್ಶ್ವಯಶ್ಚ ಸಶರೌ ರಾಮಲಕ್ಷ್ಮಣೌ ।**
**ನಮ್ಮ ಮುಂದೆ ಲಕ್ಷ್ಮೀನರಸಿಂಹ, ಹಿಂದೆ ಶ್ರೀಕೃಷ್ಣ ಮತ್ತು ಎಡಬಲದಲ್ಲಿ ಧನುರ್ಧಾರಿಗಳಾದ ರಾಮಲಕ್ಷ್ಮಣರು ಇದ್ದು ಕಾಪಾಡುತ್ತಾರೆ.**

ಇವರು ಒಮ್ಮೆ ತಮ್ಮ ಪೂರ್ವಾಶ್ರಮದಲ್ಲಿ ಚಿನಿವಾರವೃತ್ತಿಯಲ್ಲಿದ್ದಾಗ ತಮ್ಮ ಬಳಿ ಬಂಗಾರದ ಆಭರಣಗಳನ್ನು ಹೊತ್ತು ಕೊಂಡು ಹೋಗುತ್ತಿದ್ದಾಗ, ಕೆಲವು ಕಳ್ಳರು ಇವರ ಬಳಿಯಿದ್ದ ಆಭರಣಗಳನ್ನು ಕಸಿಯಲು ಬಂದಾಗ, ತಾವೇ ಹೆದರಿಕೊಂಡು ಓಡಿಹೋದರು. ಇದನ್ನು ಕಂಡ ಆಚಾರ್ಯರ ಸಹವರ್ತಿಗಳು ಆಶ್ಚರ್ಯರಾದರು.
ಯಾದವಾರ್ಯರಿಗೂ ಸಹ ಇದರ ಮರ್ಮ ತಿಳಿಯಲಿಲ್ಲ. ಆದರೆ ಕೆಲವರಿಗೆ ಮಾತ್ರ ಇವರ ಹಿಂದೆ ನರಸಿಂಹ, ಕೃಷ್ಣ, ರಾಮ-ಲಕ್ಷ್ಮಣರು ಕಂಡಿದ್ದರು.

ತಮ್ಮ ಗುರುಗಳನ್ನು ಪ್ರಶ್ನಿಸಿದಾಗ ಅವರು ಹೇಳಿದರು "ನೀನು ನಿತ್ಯ ಪಾರಾಯಣ ಮಾಡುವ ಆ ಮಂತ್ರದ ಪ್ರಭಾವದಿಂದ ರಾಮ-ಲಕ್ಷ್ಮಣರು, ನರಸಿಂಹದೇವರು ಶ್ರೀಕೃಷ್ಣ ಅವರಿಗೆ ನಿಮ್ಮ ಸೈನಿಕರಾಗಿ ಅವರಿಗೆ ಕಂಡುಬಂದಿದ್ದರು, ನಿನ್ನನ್ನು ಸಂರಕ್ಷಿಸುತ್ತಿದ್ದಾರೆ" ಎಂದರು.

(ಈ ವಿಷಯವನ್ನು ಮೈಸೂರಿನ ಶ್ರೀ ದೇವೇಂದ್ರತೀರ್ಥರು ತಮ್ಮ ಶಿಷ್ಯರಿಗೆ ಹೇಳಿ, ನಾವು ಮನೆಯಿಂದ ಹೊರಗಡೆ ಹೋಗುವಾಗ ತಪ್ಪದೇ ಈ

ಮಂತ್ರವನ್ನು ಪಾರಾಯಣ ಮಾಡಿಕೊಂಡು ಹೊರಡಬೇಕೆಂದು ಹೇಳುತ್ತಿದ್ದರು.)

ಈ ಒಂದು ವಿಷಯ ಅವರಲ್ಲಿ ಬಹಳ ಬದಲಾವಣೆ ಮಾಡಿ ಪೂರ್ಣ ವೈರಾಗ್ಯಕ್ಕೆ ದಾರಿಯಾಯಿತು ಮತ್ತು ಹೆಚ್ಚಿನ ವಿದ್ಯಾಭ್ಯಾಸಕ್ಕೆ ವೇದೇಶತೀರ್ಥರಲ್ಲಿ ಕೋರಿಕೊಂಡರು. ಇವರಿಗೆ ರಾಜಾದಿಗಳು ಧನ ಸಹಾಯ ಮಾಡಲಪೇಕ್ಷಿಸಿದಾಗ, ಎಲ್ಲವನ್ನೂ ತಿರಸ್ಕರಿಸಿ, ಬರೀ ಜೋಳದ ನುಚ್ಚನ್ನು ಮಾತ್ರ ಸ್ವೀಕರಿಸಿದರು.

**ಪವಾಡಗಳು –**

**ಒಮ್ಮೆ ಪಂಡರಾಪುರದಲ್ಲಿ ಪಾಂಡುರಂಗಿ ಕೇಶವಾಚಾರ್ ಎಂಬ ಘನ ವಿದ್ವಾಂಸರು, ಭಾಗವತವನ್ನು ಬಿಟ್ಟು ಬೇರೆಲ್ಲ ಗ್ರಂಥಗಳನ್ನು ಅಭ್ಯಾಸ ಮಾಡಿದ್ದರು. ಯಾದವಾರ್ಯರು ಅವರಿಗೆ ಭಾಗವತವನ್ನು ಅಭ್ಯಾಸಮಾಡಲು ಹೇಳಿದರು. ಆದರೆ ಅವರು ಅದನ್ನು ಕೇಳಲಿಲ್ಲ. ಒಮ್ಮೆ ಯಾದವಾರ್ಯರು ಭಾಗವತ ಪ್ರವಚನವನ್ನು ಕೇಶವಾಚಾರ್ಯರ ತಾಯಿಗೆ ಹೇಳುತ್ತಿದ್ದರು. ಅದನ್ನು ಕೇಳುತ್ತಿದ್ದ ಅವರು ಭಾಗವತ ಪ್ರವಚನ ಮುಗಿಯುವವರೆಗೂ ಪ್ರತಿದಿನ ಉಪವಾಸವಿದ್ದು ಕೇಳುತ್ತಿದ್ದರು. ಒಮ್ಮೆ ಯಾದವಾರ್ಯರು ಪರಸ್ಥಳಕ್ಕೆ ಹೋಗಿದ್ದರಿಂದ ಕೇಶವಾಚಾರ್ಯರ ತಾಯಿ ಭಾಗವತ ಪ್ರವಚನವಿಲ್ಲದೆ ಉಪವಾಸವಿದ್ದರು. ಇದರಿಂದ ನೊಂದ ಅವರು ತಾವೇ ಭಾಗವತ ಪ್ರವಚನವನ್ನು ಮಾಡಲು ಪ್ರಯತ್ನಿಸಿದಾಗ ಅದರಲ್ಲಿದ್ದ ಶ್ಲೋಕಗಳು, ಮತ್ತು ಯಾದವಾರ್ಯರ ಮಾತು ತಮ್ಮ ಕಿವಿಯಲ್ಲಿ ಘಂಟೆಯಂತೆ ಬಾರಿಸತೊಡಗಿತು. ಅವರ ಕಣ್ಣಲ್ಲಿ ಆನಂದಭಾಷ್ಪ ತುಂಬಿತು. ಮತ್ತು ಅಂದು ಆರಂಭಿಸಿದ ಭಾಗವತ ಅಭ್ಯಾಸ/ಪ್ರವಚನ ತಮ್ಮ ಕೊನೆ ಉಸಿರಿರುವವರೆಗೂ ನಡೆಸಿಕೊಂಡು ಬಂದರು ಕೇಶವಾಚಾರ್ಯರು.**

ಮತ್ತೊಮ್ಮೆ ಯಾದವಾರ್ಯರ ಸಂಬಂಧಿಯೊಬ್ಬರ ಮಗು ಯಾದವಾರ್ಯರ ತೊಡೆಯ ಮೇಲೆ ಕೊನೆ ಉಸಿರೆಳೆಯಿತು. ಯಮಭಟರು ಬಂದು ಆ ಜೀವವನ್ನು ಸೆಳೆಯಲು ಬಂದಾಗ ಅವರಿಗೆ ಸಾಧ್ಯವಾಗಲಿಲ್ಲ. ಏಕೆಂದರೆ ಯಾದವಾರ್ಯರ ತೊಡೆಯಲ್ಲಿತ್ತು ಆ ಮಗು. ಆಗ ಅವರು ಯಾದವಾರ್ಯರನ್ನು ಹೇಗಾದರೂ ಮಾಡಿ ಮುಂದೆ ಹೋಗಬೇಕೆಂದು ಪ್ರಯತ್ನಿಸಿ ಸಫಲವಾದಾಗ ಯಾದವಾರ್ಯರು ಆ ಮಗುವನ್ನು ಕೆಳಗೆ ಮಲಗಿಸಿದಾಗ, ಆ ಜೀವವನ್ನು ತೆಗೆದುಕೊಂಡು ಹೋದರು. ಇದರಿಂದ ಯಮಭಟರಿಗೆ ಯಾದವಾರ್ಯರಿಗಿದ್ದ ಗೌರವ ತಿಳಿಯುತ್ತದೆ.

## ಇವರ ಸಮಕಾಲೀನರು –

ರಾಘವೇಂದ್ರಸ್ವಾಮಿಗಳು
ಶ್ರೀವೇದೇಶತೀರ್ಥರು
ಬಿದರಹಳ್ಳಿ ಶ್ರೀನಿವಾಸತೀರ್ಥರು
ಕಂಬಾಲೂರು ರಾಮಚಂದ್ರತೀರ್ಥರು
ಪಾಂಡುರಂಗಿ ಕೇಶವಾಚಾರ್ಯರು
ಪಾಂಡುರಂಗಿ ಶ್ರೀನಿವಾಸಾಚಾರ್ಯರು
ತರಂಗಿಣಿ ರಾಮಾಚಾರ್ಯರು
ಭಲಾರಿ ನಾರಾಯಣಾಚಾರ್ಯರು

**ಸಂಗ್ರಹ – ನರಹರಿ ಸುಮಧ್ವ**